ದಿನಾಂಕ:20.05.2014ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಹಾಗೂ ಅಧ್ಯಕ್ಷರು, ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಇವರ ಅಧ್ಯಕ್ಷತೆಯಲ್ಲಿ- ನಡೆದ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಅಪಂ.ರಾಜ್ ಇಲಾಖೆ.
2. ನಿರ್ದೇಶಕರು, SWSM ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ, ಗ್ರಾಅಪಂ.ರಾಜ್ ಇಲಾಖೆ.
3. ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ), ಗ್ರಾಅಪಂ.ರಾಜ್ ಇಲಾಖೆ.
4. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ.ರಾಜ್ ಇಲಾಖೆ.
5. ಮುಖ್ಯ ಇಂಜಿನಿಯರ್, PRED, ಬೆಂಗಳೂರು.
6. ಅಧೀಕ್ಷಕ ಅಭಿಯಂತರರು (MVS), CE/PRED ಕೇಂದ್ರ ಕಛೇರಿ, ಬೆಂಗಳೂರು.
7. ವಿಜ್ಞಾನಿಗಳು, ಕೇಂದ್ರ ಅಂತರ್ಜಲ ಮಂಡಳಿ, ಸೌತ್ ವೆಸ್ಟ್ರನ್ ರೀಜನ್, 27ನೇ ಮುಖ್ಯ ರಸ್ತೆ, 7ನೇ ಅಡ್ಡ ರಸ್ತೆ, ಹೆಚ್ಎಸ್ಆರ್ ಲೇಔಟ್, ಸೆಕ್ಟರ್–1 ಬೆಂಗಳೂರು.

ಮುಖ್ಯ ಇಂಜಿನಿಯರ್, PREDರವರು ಸಮಿತಿಯ ಮುಂದೆ ಕೆಳಕಂಡ 4 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ ತಾಂತ್ರಿಕ ಸಮರ್ಥನೆಯನ್ನು ನೀಡಿ ಸದರಿ ಟೆಂಡರ್ ಪ್ರಸ್ತಾಪಗಳಿಗೆ ಅನುಮೋದನೆ ಕೋರಿದರು.

| ಕ್ರ ಸ | ಕಾಮಗಾರಿ ಹೆಸರು | ಟೆಂಡರ್ ಗಿಟ್ಟ ಮೊತ್ತ | ಸಿಎಸ್ಆರ್ ದರಗಳನ್ವಯ ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) | ಗುತ್ತಿಗೆ ದಾರರ ಹೆಸರು | ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ / ಶೇಕಡ ಹೆಚ್ಚುವರಿ | | | ಸಂಧಾನದ ಟೆಂಡರ್ ಮೊತ್ತ / ಶೇಕಡ ಹೆಚ್ಚುವರಿ | | ಷರಾ |
|---|---|---|---|---|---|---|---|---|---|---|
| | | | | | ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತದ ಮೇಲೆ ಶೇಕಡ ಹೆಚ್ಚುವರಿ | ಶೇಕಡ ಹೆಚ್ಚುವರಿ ಸಿಎಸ್ಆರ್ ದರಗಳ ಮೇಲೆ | ಗುತ್ತಿಗೆದಾರರು ಸಂಧಾನದಲ್ಲಿ ಒಪ್ಪಿರುವ ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ) | ಶೇಕಡ. ಹೆಚ್ಚು / ಕಡಿಮೆ (ಸಿಎಸ್ಆರ್ ದರದಂತೆ) | |
| 1 | ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ಆಗಸನೂರು ಗ್ರಾಮದ ಕುಡಿಯುವ ನೀರು ಸರಬರಾಜು ಯೋಜನೆ | 189.97 | 191.34 | ಶ್ರೀ ಪಿ. ಯರ್ರಿ ಬಸವನಗೌಡ ಬಳ್ಳಾರಿ | 217.50 | 14.49% ಹೆಚ್ಚು | 13.67% ಹೆಚ್ಚು | 210.45 | 9.99% ಹೆಚ್ಚು | 1ನೇ ಕರೆ |
| 2 | ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ಬಗ್ಗೂರು ಮತ್ತು ಇತರೆ 5 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆ | 379.24 | 384.42 | ಶ್ರೀ ಜಿ.ಪ್ರಹ್ಲಾದ ರೆಡ್ಡಿ ಬಳ್ಳಾರಿ | 430.78 | 13.59% ಹೆಚ್ಚು | 12.06% ಹೆಚ್ಚು | 422.55 | 9.92% ಹೆಚ್ಚು | 1ನೇ ಕರೆ |
| 3 | ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ಉತ್ತನೂರು ಮತ್ತು ಇತರೆ 3 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನ | 438.06 | 443.58 | ಶ್ರೀ ಜಿ.ಪ್ರಹ್ಲಾದ ರೆಡ್ಡಿ ಬಳ್ಳಾರಿ | 516.91 | 18.00% ಹೆಚ್ಚು | 16.53% ಹೆಚ್ಚು | 487.80 | 9.97% ಹೆಚ್ಚು | 1ನೇ ಕರೆ |
| 4 | ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆ ಮತ್ತು ಇತರೆ 26 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನ | 3090.86 | 3162.54 | ಮೆ.ಹರಿಕಾನ್ ಇಂಜಿನಿಯರ್ & ಕಂಟ್ರಾಕ್ಟರ್ ಹುಬ್ಬಳ್ಳಿ | 3696.75 | 19.60% ಹೆಚ್ಚು | 16.89% ಹೆಚ್ಚು | 3684.36 | 16.50% ಹೆಚ್ಚು | 3ನೇ ಕರೆ |

ಅನುಮೋದಿತ CSR ಮೊತ್ತಕ್ಕಿಂತ 9.99% ಜಾಸ್ತಿ ನಮೂದಿಸಿರುವ ಕ್ರಮಸಂಖ್ಯೆ:(1)ರಲ್ಲಿನ ಬಳ್ಳಾರಿ ಜಿಲ್ಲೆ, ಸಿರುಗುಪ್ಪ ತಾಲ್ಲೂಕಿನ ಆಗಸನೂರು ಗ್ರಾಮದ ಕುಡಿಯುವ ನೀರು ಸರಬರಾಜು ಯೋಜನೆ, 9.92% ಹೆಚ್ಚಿರುವ ಕ್ರಸಂ:(2)ರಲ್ಲಿನ ಬಗ್ಗೂರು ಮತ್ತು ಇತರೆ 5 ಗ್ರಾಮಗಳ ಯೋಜನೆ ಮತ್ತು 9.97% ಹೆಚ್ಚಿರುವ ಕ್ರಸಂ:(3)ರಲ್ಲಿನ ಉತ್ತನೂರು ಮತ್ತು ಇತರೆ 3 ಗ್ರಾಮಗಳ ಯೋಜನೆಗಳ ಟೆಂಡರ್ ಪ್ರಸ್ತಾಪಕ್ಕೆ ಅನುಮೋದನೆ ನೀಡಲು ಸಮಿತಿಯು ನಿರ್ಧರಿಸಿತು.

ಕ್ರಮ ಸಂಖ್ಯೆ:(4)ರಲ್ಲಿನ ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆ ಮತ್ತು ಇತರೆ 26 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆಯ ಪ್ರಸ್ತಾಪವು 3ನೇ ಟೆಂಡರ್ ಕರೆಯಾಗಿದ್ದು, DBOTಯಡಿ 16.50% ರಷ್ಟು ಹೆಚ್ಚು ಬಿಡ್‌ದರ ನಮೂದಾಗಿದ್ದು, CSR ಮೊತ್ತಕ್ಕಿಂತ ಜಾಸ್ತಿ ಇರುವುದರಿಂದ ಟೆಂಡರ್ ಅಂಗೀಕಾರ ಪ್ರಾಧಿಕಾರವು ಗುತ್ತಿಗೆದಾರರೊಂದಿಗೆ ಮರು ಸಂಧಾನ ನಡೆಸಿ ಟೆಂಡರ್ ಪ್ರೀಮಿಯಂನ್ನು ಶೇ.15ಕ್ಕಿಂತ ಕಡಿಮೆ ಮಾಡಲು CE/PRED ರವರಿಗೆ ತಿಳಿಸಿದರು. ಒಂದು ವೇಳೆ ಗುತ್ತಿಗೆದಾರರು ಟೆಂಡರ್ ಪ್ರೀಮಿಯಂನ್ನು ಶೇ.15ಕ್ಕಿಂತ ಕಡಿಮೆ ಮಾಡಲು ಒಪ್ಪದಿದ್ದಲ್ಲಿ ಅಲ್ಪಾವಧಿ ಟೆಂಡರ್ ನೋಟಿಫಿಕೇಷನ್ (15ದಿನ) ಮೂಲಕ ಮರು ಟೆಂಡರ್ ಕರೆಯಲು ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರಿಗೆ ಸೂಚಿಸಲಾಯಿತು.

ಇದಲ್ಲದೆ, 2014ರ ಸಾಲಿನ SR ದರ ಘೋಷಣೆಯ ಪ್ರಸ್ತಾಪ ಹಾಗೂ **ರೂ.5ಕೋಟಿ** ಮೊತ್ತದ ವ್ಯಾಪ್ತಿಯೊಳಗಿನ ಟೆಂಡರ್ ಪ್ರಸ್ತಾಪಗಳು ಬಂದಲ್ಲಿ (in the event of more than one bidder or 2 or 3rd call only) ಟೆಂಡರ್ ಪ್ರೀಮಿಯಂ ಮೊತ್ತವನ್ನು ಹಾಲಿಯಿರುವ 5% ನಿಂದ 10%ವರೆಗೆ CE/PREDರವರೇ ಪರಿಶೀಲಿಸಿ, ತಾಂತ್ರಿಕ ಸಮಿತಿ ಶಿಫಾರಸ್ ಆಧರಿಸಿ ನಿರ್ಣಯ ಕೈಗೊಳ್ಳಲು ಅಧಿಕಾರ ನೀಡುವ ಸಂಬಂಧ ಪ್ರಸ್ತಾಪ ನೀಡಲು CE/PREDಗೆ ಸೂಚಿಸಲಾಯಿತು. ಇದಲ್ಲದೆ, ಇನ್ನು ಮುಂದೆ ಅನಗತ್ಯ ವಿಳಂಬ ತಪ್ಪಿಸಲು DBOT ಟೆಂಡರ್ ಪ್ರಸ್ತಾಪಗಳನ್ನು CE/PRED ಕೇಂದ್ರ ಕಛೇರಿಯಲ್ಲಿ ಮಾಡಬೇಕೆಂದು ಸಹ ಸೂಚಿಸಲಾಯಿತು.

ಸಹಿ/-
(ಟಿ.ಎಂ.ವಿಜಯ ಭಾಸ್ಕರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ
ಅಧ್ಯಕ್ಷರು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸಂಖ್ಯೆ:ಗ್ರಾಅಪ 51 ಗ್ರಾನೀಸ (5)14 ದಿನಾಂಕ:27.05.2014

**ಗೆ:**
ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
2ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ,
ಬೆಂಗಳೂರು-09 ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಇವರ ಮಾಹಿತಿಗಾಗಿ.

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಇಮೇಲ್: rk3452000@gmail.com
ಫೋನ್:22032806, ಫ್ಯಾಕ್ಸ್:22203175